155(374) ಶ್ರೀ ಬಾಲರಾಜ್ ಎಸ್ ಕೊಳ್ಳೇಗಾಲ

ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಪಶುಸಂಗೋಪನಾ ಕಾಲೇಜುಗಳೆಷ್ಟು? ಎಲ್ಲೆಲ್ಲಿ ಸ್ತಾಪಿಸಲಾಗಿದೆ? (ವಿವರ ನೀಡುವುದು)

ಆ) ಹೊಸದಾಗಿ ಪಶುಸಂಗೋಪನಾ ಕಾಲೇಜನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಎಲ್ಲೆಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಸ್ಥಾಪಿಸುವ ಉದ್ದೇಶವಿದೆಯೇ?

ಈ) ಚಾಮರಾಜನಗರ ಜಿಲ್ಲೆಯಲ್ಲಿ ಪಶುವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಖಾಲಿ ಇರುವ ಹುದ್ದೆಗಳ ವಿವರ ನೀಡುವುದು)

ಉ) ಖಾಲಿ ಇರುವ ಪಶು ವೈದ್ಯರನ್ನು ನೇಮಕ ಮಡಲು ಕ್ರಮ ಕೈಗೊಳ್ಳಲಾಗಿದೆಯೇ?

ಊ) ಹಾಗಿದ್ದಲ್ಲಿ ಯಾವಾಗ ನೇಮಕ ಮಾಡಲಾಗುವುದು?

ಶ್ರೀ ರೇವೂನಾಯಕ ಬೆಳಮಗಿ

ಅ) ರಾಜ್ಯದಲ್ಲಿ ಒಟ್ಟು 4 ಪಶುವೈದ್ಯಕೀಯ ಮಹಾವಿದ್ಯಾಲಯ ಗಳಿದ್ದು, ಅವುಗಳ ವಿವಿರ ಈ ಕೆಳಗಿನಂತಿವೆ

ಕ್ರ.ಸಂ	ಪಶುವೈದ್ಯಕೀಯ ಮಹಾವಿದ್ಯಾಲಯದ ಹೆಸರು	ಸ್ಥಾಪನಾವರ್ಷ
1	ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ ಬೆಂಗಳೂರು	1969
2	ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್	1984
3	ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ	2006
4	ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ	2007

ಈ ಎಲ್ಲಾ ಪಶುವೈದ್ಯಕೀಯ ಮಹಾವಿದ್ಯಾಲಯಗಳು ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರಿನ ಅಂಗಶಿಕ್ಷಣ ಸಂಸ್ಥೆಗಳಾಗಿರುತ್ತವೆ

ಆ) ಇಲ್ಲ

ಇ) ಇಲ್ಲ, ಉದ್ಭವಿಸುವುದಿಲ್ಲ

ಈ)ಚಾಮರಾಜನಗರ ಜಿಲ್ಲೆಯಲ್ಲಿ ಪಶುವೈದ್ಯರ ಹುದ್ದೆ ಖಾಲಿ ಇರುವುದು ಗಮನಕ್ಕೆ ಬಂದಿರುತ್ತದೆ ಜಿಲ್ಲೆಯಲ್ಲಿ 4 ಸಹಾಯಕ ನಿರ್ದೇಶಕರು ಹಾಗೂ 24 ಪಶುವೈದ್ಯಾಧಿಕಾರಿಗಳಹುದ್ದೆ ಖಾಲಿ ಇರುತ್ತದೆ ಅವುಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ

ತಾಲ್ಲೂಕು	ಸಹಾಯಕ ನಿರ್ದೇಶಕರು			ಪಶುವೈದ್ಯಾಧಿಕಾರಿ		
	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ
ಚಾಮರಾಜನಗರ	04	03	01	15	07	08
ಗುಂಡ್ಲುಪೇಟೆ	04	01	03	09	01	08
ಕೊಳ್ಳೇಗಾಲ	02	02	00	07	02	05
ಯಳಂದೂರು	01	01	00	04	01	03
ಒಟ್ಟು	**11**	**07**	**04**	**35**	**11**	**24**

ಉ) ಹೌದು ಕ್ರಮ ಕೈಗೊಳ್ಳಲಾಗುತ್ತಿದೆ

ಊ) ಪಶೂವೈದ್ಯಾಧಿಕಾರಿಗಳ ಕಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ನಿಯಮದಡಿ ಇಲಾಕೆಯಲ್ಲಿ ಖಾಲಿ ಇರುವ 276 ಪಶು ವೈಧ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿಮಾಡಲು ಅರ್ಹ ಅರ್ಜಿದಗಳಿಂದ ಅರ್ಜಿ ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗಿದ್ದು ಇದೀಗ ಬಂದಿರುವ ಅರ್ಜಿಗಳು ಪರಿಶೀಲನೆಯಲ್ಲಿವೆ ನೇಮಕಾತಿ ಪ್ರಕ್ರಿಯೆ ಮುಗಿದ ಕೂಡಲೇ ಚಾಮರಾಜನಗರ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕ ಮಾಡಲು ಕ್ರಮ ವಹಿಸಲಾಗುವುದು

375(56) ಶ್ರೀ ಬಾಲರಾಜ್ ಎಸ್ ಕೊಳ್ಳೇಗಾಲ

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ವೈದ್ಯಕೀಯ ಕಾಲೇಜುಗಳೆಷ್ಟು?

ಆ) ಅದರಲ್ಲಿ ಖಾಸಗಿ ಮತ್ತು ಸರ್ಕಾರಿ ಕಾಲೇಜುಗಳೆಷ್ಟು(ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಒಬ್ಬ ವೈದ್ಯಕೀಯ ವಿದ್ಯಾರ್ಥಿಗೆ ಪ್ತಿ ವರ್ಷ ತಗಲುವ ಶುಲ್ಕವೆಷ್ಟು (ಪೂರ್ಣ ಮಾಹಿತಿ ನೀಡುವುದು)

ಈ) ರಾಜ್ಯದಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆಯೇ

ಉ) ಹಾಗಿದ್ದಲ್ಲಿ, ಎಲ್ಲೆಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ (ವಿವರ ನೀಡುವುದು)